

ಹನ್ನೆರಡರವರೆಗೂ ನಾಳಿನ ನಂಬರ್ ಕೇಳಲು ಬರುವ ಭಕ್ತರು. ಜೊತೆಗೆ ದೆವ್ವದ ಕೇಸುಗಳು. ಈತನದು ಕಟ್ಟುಮಸ್ತಾದ ಮೈಕಟ್ಟು, ಓಣಿಯ ಸುತ್ತಮುತ್ತಲ ಹುಡ್ಗೀರು ಹೆಣ್ಣಾಯಿಗಳಂತೆ ಈತನ ಮನೆಯ ಆಸುಪಾಸೇ ತಿರುಗುತ್ತಿದ್ದರು. ಈತನೇನು ಕಡಿಮೆಯಿರಲಿಲ್ಲ. ಬಹುತೇಕ ಹುಡ್ಗಿರ‍್ಗೂ.... ಊರು ಬಿಡುವಾಗ್ಲೂ ಸಹಿತ ಒಬ್ಬ ಹುಡುಗಿಯ ಸಮೇತ ಹಡಗಲಿಗೆ ಬಂದು ಸೇರಿದ್ದ. ಭರಮಪ್ಪ ಕೂಗಿದ ತಕ್ಷಣವೇ ಹೊರಬಂದ ನಾಗಜ್ಜ, ಗಿರಾಕಿ ಕಂಡು ಖುಷಿಯಿಂದ ಬಂದ. ಮನೆಯಲ್ಲಿ ಪಕ್ಕದ ಮನೆ ಈರವ್ವ ಬೇವಿನ ಸೊಪ್ಪನ್ನು ಹಿಡಿದು 'ಯಾರ‍್ನೀ, ಇಲ್ಯಾಕ್ಬಂದಿ ಬೊಗ್ಳು' ಎಂದು ಬಸ್ವಿಯನ್ನು ಹಣ್ಣುಗಾಯಿ ನೀರುಗಾಯಿ ಮಾಡಿದ್ದಳು. ಕೀರಲು ಧ್ವನಿಯಲ್ಲಿ ನಾನು ಬಸ್ವಿ ಬಿಡವ್ವ ಎಂದರೂ ಬಿಟ್ಟಿರಲಿಲ್ಲ. ಒಳಗಿಂದ ಬಂದ ನಾಗಜ್ಜನ ನೋಡಿದ ಹುಡುಗರೆಲ್ಲರೂ ನಾಗಜ್ಜ ಬಂದ್ರು ನಾಗಜ್ಜ ಬಂದ್ರು ಎಂದು ಹೊರಗೆ ಓಡಿದವು. ನಾಗಜ್ಜ ಬಸ್ವಿಯನ್ನು ಕೆಳಗೆ ಮಲಗಿಸಿ ತನ್ನ ಕೈಯಲ್ಲಿದ್ದ ಬೂದಿಯನ್ನು ಆಕೆಯ ಸುತ್ತ ಉಗ್ಗಿದ. ಏನೂ ಫಲಿಸಲಿಲ್ಲ. ಒಂದಿಷ್ಟು ಸುಣ್ಣವನ್ನು ತೆಗೆದುಕೊಂಡು ಅದರಲ್ಲಿ ಎಂತದೋ ಬಿಳಿ ಪುಡಿಯನ್ನು ಸೇರಿಸಿ ತಿಕ್ಕಿ ಆಕೆಯ ಮೂಗಿಗೆ ಹಿಡಿದ. ತಕ್ಷಣವೇ ಬಸ್ವಿ ಅದರ ಘಾಟು ತಾಳಲಾರದೆ ಎದ್ದು ಓಲಾಡತೊಡಗಿದಳು. 'ನೋಡಪ್ಪ ಭರಮಪ್ಪ ಇದು ಮಾಮೂಲಿ ದೆವ್ವಲ್ಲ. ಇದಕ್ಕ ಏನಾರ ಮಾಡ್ಲೇಬೇಕು. 'ಭಾಳ ಖರ್ಚ್ ಆಕ್ಕೈತಿ. ನೀ ಎಲ್ಲಾದ್ನು ತಂದ್ರ ನಾನು ಸಂಜಿ ಮುಂದ ಮಾಡಿಡ್ತೀನಿ' ಎಂದು ನಾಗಜ್ಜ ಹೇಳ್ತಿದ್ದಂಗೆ, ಬೆಳಿಗ್ಗೆ ಫಾಜಿಲನ ಅಂಗಡೀಲಿ ಖರ್ಚಾಗದೇ ಹಂಗೇ ಉಳಿಸಿಕೊಂಡಿದ್ದ ದುಡ್ಡಿನಲ್ಲಿ ನಾಗಜ್ಜ ಹೇಳಿದ ಎಲ್ಲವನ್ನೂ ತಂದ. ಸಂಜಿ ಮುಂದ ಬಂದ ಭರಮಪ್ಪ, ನಾಗಜ್ಜನ ಮುಂದೆ ತಲೆಬಗ್ಗಿಸಿ ಕೂತ್ಗೊಂಡು ನಾಗಜ್ಜ ಹೇಳಿದ್ದಕ್ಕೆಲ್ಲಾ ತಲೀ ಆಡಿಸತೊಡಗಿದ. 'ದುಡ್ಡು ಎಷ್ಟಾರ ಹೋಗ್ಲಿ ನಾಗಪ್ಪಜ್ಜ ನನ್ ಬಸ್ವಿ ಇದ್ರೆ ಸಾಕು' ಎಂದು ನಾಗಜ್ಜನಿಗೆ ಮಾತು ಕೊಟ್ಟ. ಅದರಂತೆ ಬಸ್ವಿಗೆ ತನ್ನ ಮುಂದೆ ಕೂಡಿಸಿಕೊಂಡು ನಾಗಜ್ಜ ತಲೆ ಮೇಲೆ ಕೈಯಿಟ್ಟು ಕಣ್ಣು ಮುಚ್ಚಿ ಏನೇನೊ ಗುನುಗುನಿಸಿದ. ನೋಡಪ್ಪ ಭರಮಪ್ಪ, ಇದನ್ನ ತಗಂಡ್ಹೋಗಿ ಮೂರು ದಾರಿ ಸೇರೋ ಜಾಗದಾಗ ಹಾಕಿ ಬಾ ಎಂದು ಒಂದು ಬಟ್ಟೆಯಲ್ಲಿ ನಿಂಬೆಹಣ್ಣು, ತೆಂಗಿನಕಾಯಿ, ಇನ್ನೂ ಒಂದಿಷ್ಟು ವಸ್ತುಗಳನ್ನಿಟ್ಟು ಕೊಟ್ಟ. ಕೊಟ್ಟು, 'ಆಯ್ತು ನೀವು ಹೋಗ್ರಿ' ಎಂದು ಅವರಿಬ್ಬರಿಗೂ ಅಲ್ಲಿಂದ ಬೀಳ್ಕೊಟ್ಟು ತಾನು ಎದ್ದು ಒಳಗೆ ಹೋದ.

ಭರಮಪ್ಪ ಈ ನಾಗಜ್ಜನ ಮಾತಿನಂತೆ ಎಲ್ಲವನ್ನೂ ಎತ್ತಿಕೊಂಡು ಬಸ್ವಿಯನ್ನು ಕರೆದುಕೊಂಡು ಹೊರ ನಡೆದ. 'ನಾನು ಇದನ್ನ ಹಾಕಿ ಬರ್ತೀನಿ ನೀನು ಮನಿಗೆ ನಡಿ' ಎಂದು ಆಕೆಯನ್ನು ಮನೆಗೆ ಕಳುಹಿಸಿ ತಾನು ಮೂರು ದಾರಿ ಸೇರುವಲ್ಲಿ ಅವುಗಳನ್ನು ಹಾಕಲು ಹೋದ.

ತುಂಬು ಬಸುರಿಯಾದ ಬಸ್ವಿ ತನ್ನ ದೇಹದ ಭಾರವನ್ನೇ ಹೊರಲಾರದೆ ನಡೆಯುತ್ತಾ ಮನೆ ಸೇರಿದಳು. ಆ ಪುಡಿಯ ವಾಸನೆ ತಾಳಲಾರದೆ ಆಕೆಗೆ ತಲೆ ಸುತ್ತು ಬರ‍್ತಾಯಿತ್ತು. ಮನೆಗೆ ಹೋಗಿ ಮಲ್ಲಿಯ ಕೈಯಿಂದ ನೀರು ತರಿಸಿಕೊಂಡು ಕುಡಿದಳು. ನೀರು ಕುಡಿದು ಕುಳಿತುಕೊಳ್ಳಲು ಆಗದೆ ತಕ್ಷಣ ಹಿಂದಕ್ಕೆ ಬಿದ್ದಳು. ವಾಪಸ್ಸು ಮನೆಗೆ ಬರುವಾಗ ಭರಮಪ್ಪ ದಾರೀಲಿ ಯಾರೋ ಇಟ್ಟಿದ್ದ ನಿಂಬೆಹಣ್ಣು ತುಳಿದಿದ್ದ, ಆ ನಿಂಬೆಹಣ್ಣು ಪಿಚಕ್ ಎಂದಿತ್ತು. ಗಾಬರಿಗೊಂಡ ಭರಮಪ್ಪ ಮನೆಗೆ ಓಡೋಡಿ ಬಂದ. ಆತ ಮನೆ ಸೇರುವಷ್ಟರಲ್ಲಿ ಮಕ್ಕಳೆಲ್ಲವೂ ಚೀರಾಡುತ್ತಿದ್ದವು. ಅಕ್ಕಪಕ್ಕದವರೂ ಕೂಡ. ಬಸ್ವಿಯನ್ನು ಕಳೆದುಕೊಂಡ ಇಡೀ ಓಣಿ ಬಸವ್ವಳ ಬದುಕಿನ ಛಲವನ್ನು ಮೆಲುಕು ಹಾಕುತ್ತಿತ್ತು. ಇನ್ನು ಮುಂದೆ ತನಗೆ ಜಗತ್ತೇ ಶೂನ್ಯ, ಏನೂ ಇಲ್ಲ ಈ ಜಗದೊಳು ಎಲ್ಲಾ ಖಾಲಿ ಎನ್ನುವಂತೆ, ಕಣ್ಣು ಕೆಂಪಾಗುವಂತೆ ಅಳುವನ್ನು ತಡೆದುಕೊಂಡಿದ್ದ. ಇದ್ಯಾವುದರ ಪರಿವೇ ಇಲ್ಲದೆ ಮಣ್ಣೊಳಗಿನ ಕಲ್ಲನ್ನು ಕೈಯಲ್ಲಿಡಿದು ಬಸ್ಸಿನಂತೆ ಓಡಿಸುತ್ತಿದ್ದ ರೂಪಿಯನ್ನು ಎತ್ತಿಕೊಂಡು ಫಾಜಿಲನ ಅಂಗಡಿ ಕಡೆಗೆ ಭರಮಪ್ಪ ಹೆಜ್ಜೆ ಹಾಕತೊಡಗಿದ. ●